**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯಃ ಬೇಲೂರು**

**ಃಸಿ.ಸಿ. 29/2022**

ಪಿರ್ಯಾದಿ : ಶ್ರೀ ಗವಿತ್ ಬಿ.ಕೆ. ಃಬಿನ್ಃ ಕೆಂಚೇಗೌಡ
35 ವರ್ಷ, ಬಿ. ಸೋಮನಹಳ್ಳಿ ಗ್ರಾಮ,
ಕಸಬಾ ಹೋಬಳಿ, ಬೇಲೂರು ತಾಲ್ಲೂಕು,
ಹಾಸನ ಜಿಲ್ಲೆ.

**ವಿರುದ್ದ**

ಆರೋಪಿ : ಶ್ರೀ ಕೆ.ಸಿ. ನಿಂಗೇಗೌಡ ಃಬಿನ್ಃ ಚನ್ನೇಗೌಡ,
ವಯಸ್ಕರು, ಕಳ್ಳೇರಿ ಗ್ರಾಮ, ಕಸಬಾ ಹೋಬಳಿ,
ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.

**: ಆರೋಪಣೆಯ ಸಾರಾಂಶ :**

ಆರೋಪಿಯಾದ ನೀವು ಮತ್ತು ಪಿರ್ಯಾದಿ ತುಂಬಾ ವಿಶ್ವಾಸಿಗಳಾಗಿದ್ದು, ಆರೋಪಿಯಾದ ನೀವು ದಿನಾಂಕಃ 23.03.2021 ರಂದು ಪಿರ್ಯಾದಿಯಿಂದ ಮೂಟೆಗೆ 1200 ರೂನಂತೆ 400 ಮೂಟೆ ಶುಂಟಿಯನ್ನು ಖರೀದಿ ಮಾಡಿ, ಸದರಿ ಶುಂಠಿ ಖರೀದಿ ಮಾಡಿದ ಹಣ ರೂ.4,80,000/– ರೂಗಳನ್ನು ಇನ್ನೂ ಮೂರು ತಿಂಗಳಲ್ಲಿ ವಾಪಸ್ ಕೊಡುತ್ತೇನೆ ಎಂದು ಕೇಳಿಕೊಂಡ ಮೇರೆಗೆ ಪಿರ್ಯಾದಿಯು ಆರೋಪಿಯಾದ ನಿನ್ನ ಕೋರಿಕೆಯನ್ನು ಮನ್ನಿಸಿ ಅವರಿಗೆ ಶುಂಠಿಯನ್ನು ಮಾರಾಟ ಮಾಡಿರುತ್ತಾರೆ. ಪಿರ್ಯಾದಿ ಮೂರು ತಿಂಗಳ ನಂತರ ದಿನಾಂಕಃ23.06.2021 ರಂದು ತನಗೆ ಬರಬೇಕಾದ ಶುಂಠಿ ಹಣವನ್ನು ಕೊಡುವಂತೆ ಆರೋಪಿಯನ್ನು ಕೇಳಿದಾಗ ಆರೋಪಿ ಸದರಿ ಹಣವನ್ನು ನೀಡುವ ಸಲುವಾಗಿ ಅದೇ ದಿನ ಆರೋಪಿಯಾದ ನೀವು ಖಾತೆ ಹೊಂದಿರುವ ವಿಜಯ ಬ್ಯಾಂಕ್ (ಬ್ಯಾಂಕ್ ಆಫ್ ಬರೋಡಾ) ಗೆಂಡೇಹಳ್ಳಿ ಶಾಖೆಯ ಚೆಕ್ ಸಂಃ 322131 ರಲ್ಲಿ ರೂ.4,80,000–00 ಮೊತ್ತದ ಚೆಕ್ ನ್ನು ದಿನಾಂಕಃ 23.06.2021 ಕ್ಕೆ ನಮೂದಿಸಿ ಕೊಟ್ಟಿದ್ದು, ಪಿರ್ಯಾದುದಾರರು ಸದರಿ ಚೆಕ್ ನ್ನು ದಿನಾಂಕಃ 23.06.2021 ರಂದು ಆರೋಪಿಯಾದ ನಿಮ್ಮ ಬ್ಯಾಂಕ್‌ಗೆ

ಹಾಜರುಪಡಿಸಿದಾಗ ನೀವು ಕೊಟ್ಟಂತಹ ಚೆಕ್ ನಗದಾಗದೇ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಎಂದು ದಿನಾಂಕಃ 23.06.2021 ರಂದು ಬಂದ ಹಿಂಬರಹವನ್ನು ನೀಡಿರುತ್ತಾರೆ. ನಂತರ ಪಿರ್ಯಾದಿಯು ಆರೋಪಿಯಾದ ನಿನ್ನನ್ನು ಬೇಟಿಯಾಗಿ ಈ ವಿಚಾರ ತಿಳಿಸಿ ಸಾಲದ ಹಣವನ್ನು ವಾಪಸ್ ಕೊಡುವಂತೆ ತಗಾದೆ ಮಾಡಿದ್ದು, ಕಾರಣ ಆರೋಪಿಯಾದ ನಿಮಗೆ ದಿನಾಂಕಃ 12.07.2021 ರಂದು ಚೆಕ್ ನಗಧೀಕರಣಗೊಳ್ಳದ ಸಂಗತಿಯನ್ನು ನೊಂದಾಯಿತ ಅಂಚೆಯ ನೋಟೀಸಿನ ಮೂಲಕ ಕಳುಹಿಸಿದ್ದು, ಸದರಿ ನೋಟೀಸ್ ನ್ನು ಆರೋಪಿಯಾದ ನೀವು ದಿನಾಂಕಃ 14.07.2021 ರಂದು ಸ್ವೀಕರಿಸಿದರೂ ಸಹ, ಪಿರ್ಯಾದುದಾರರಿಂದ ಸಾಲವಾಗಿ ಪಡೆದ ಹಣವನ್ನು ನೀಡದೇ, ಆರೋಪಿಯಾದ ನಿನ್ನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದೇ ಇದ್ದರೂ ಚೆಕನ್ನು ನೀಡಿ ವರ್ಗಾವಣೆಗೊಳ್ಳಬಲ್ಲ ದಸ್ತಾವೇಜುಗಳ ಅಧಿನಿಯಮ ಪ್ರಕರಣ 138 ಸಹವಾಚಕ 142 ರಂತೆ ಅಪರಾಧವನ್ನು ಎಸಗಿರುತ್ತೀಯಾ ಅಂತ ಪಿರ್ಯಾದಿ ಆರೋಪಿಸಿರುತ್ತಾನೆ.

*ಪ್ರಶ್ನೆ ಃ ಈಗ ನಿನಗೆ ಓದಿ ಹೇಳಿ ವಿವರಿಸಿದ ಆರೋಪದ ಅಂಶಗಳು ಅರ್ಥವಾಯಿತೇ?*

*ಉತ್ತರ ಃ*

*ಪ್ರಶ್ನೆ ಃ ನೀನು ಆರೋಪವನ್ನು ಒಪ್ಪುವೆಯೋ ಅಥವಾ ವಿಚಾರಣೆಯಾಗಬೇಕೋ?*

*ಉತ್ತರಃ*

(ಆಪಾದಿತನಿಗೆ ಆರೋಪದ ಅಂಶವನ್ನು ಓದಿ ಹೇಳಿ ವಿವರಿಸಿದ ಮೇಲೆ ಆತನು ಮೇಲ್ಕಂಡಂತೆ ನೀಡಿದ ಉತ್ತರವನ್ನು ಸ್ವಹಸ್ತಾಕ್ಷರದಿಂದ ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಗಿದೆ ಎಂದು ದೃಡೀಕರಿಸಲಾಗಿದೆ.)

ಸ್ಥಳ ಃ ಬೇಲೂರು
ದಿನಾಂಕಃ 30–05–2023.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು..